

## ಮೊದಲ ಪಾಠ

ಪ್ರಥಮ ವರ್ಷದ ವೈದ್ಯಕೀಯ ತರಗತಿಯ ವಿದ್ಯಾರ್ಥಿಗಳು ತಮ್ಮ ಜೀವರಸಾಯನ ಶಾಸ್ತ್ರದ ಮೊದಲ ತರಗತಿಗೆ ಹಾಜರಾಗಿದ್ದರು. ಮೂತ್ರದ ಸ್ಯಾಂಪಲ್‌ನೊಂದಿಗೆ ಪ್ರಯೋಗಾಲಯದ ಮೇಜಿನ ಸುತ್ತ ನೆರೆದಿದ್ದರು. ಪ್ರೊಫೆಸರ್ ಸಾಹೇಬರು ತಮ್ಮ ಬೆರಳನ್ನು ಆ ಮೂತ್ರದಲ್ಲಿ ಅದ್ದಿ, ನಂತರ ಬೆರಳನ್ನು ತಮ್ಮ ಬಾಯೊಳಗಿಟ್ಟರು ಮತ್ತು ಎಲ್ಲಾ ವಿದ್ಯಾರ್ಥಿಗಳಿಗೂ ಅದನ್ನನುಸರಿಸಲು ಆಜ್ಞಾಪಿಸಿದರು. ವಿದ್ಯಾರ್ಥಿಗಳು ಅನ್ಯ ವಿಧಿಯಿಲ್ಲದೆ ಮುಖ ಸಿಂಡರಿಸುತ್ತಾ ಹಾಗೇ ಮಾಡಿ ಮೂತ್ರದ ರುಚಿ ನೋಡಿದರು! ಎಲ್ಲಾ ವಿದ್ಯಾರ್ಥಿಗಳೂ ಈ ಕಾರ್ಯವನ್ನು ಪೂರೈಸಿದ ಬಳಿಕ ಪ್ರೊಫೆಸರ್ ಸಾಹೇಬರು ಹೇಳಿದರು, 'ವಿದ್ಯಾರ್ಥಿಗಳಿಗಿರಬೇಕಾದ ಪ್ರಮುಖ ಗುಣಲಕ್ಷಣಗಳಲ್ಲಿ ಗಮನವಿಟ್ಟು ಪಾಲಿಸಬೇಕಾದುದು ಒಂದು. ನಾನು ನನ್ನ ನಡುಬೆರಳನ್ನು ಮೂತ್ರದಲ್ಲಿ ಅದ್ದಿ, ತೋರು ಬೆರಳನ್ನು ಬಾಯೊಳಗಿಟ್ಟಿದ್ದೆ! ಇವತ್ತು ನೀವೆಲ್ಲರೂ ಗಮನವಿಟ್ಟು ಪಾಲಿಸುವುದು ಹೇಗೆ ಎಂಬುದನ್ನು ಕಲಿತಿರಿ' ಎಂದಾಗ ವಿದ್ಯಾರ್ಥಿಗಳೆಲ್ಲರೂ ಪರಸ್ಪರ ನೋಡುತ್ತಾ ಮುಖ ಹುಳ್ಳಗೆ ಮಾಡಿಕೊಂಡರು.

**ರಮಣ್ ಶೆಟ್ಟಿ ರೆಂಜಾಳ್**



## ಮೀಸಲು ಸ್ಥಳ

ರಮೇಶ ಹಾಗೂ ರಾಜೇಶ ಆತ್ಮೀಯ ಸ್ನೇಹಿತರು. ಇಬ್ಬರೂ ಒಂದೇ ಊರಿನವರು. ಪ್ರತಿದಿನ ಬೆಳಿಗ್ಗೆ ಇಬ್ಬರೂ ಜೊತೆಯಾಗಿಯೇ ಸರ್ಕಾರಿ ಬಸ್ಸಿನಲ್ಲಿ ತಾವು ಮಾಡುವ ಕೆಲಸದ ಸ್ಥಳಕ್ಕೆ ಪ್ರಯಾಣ ಮಾಡುತ್ತಾರೆ.
ಒಂದು ದಿನ ರಮೇಶ, 'ಸರ್ಕಾರಿ ಬಸ್ಸುಗಳಲ್ಲಿ ಈಗ ತುಂಬಾ ಸವಲತ್ತುಗಳಿವೆ ಕಣೊ. ಸರ್ಕಾರಿ ಬಸ್ಸುಗಳಲ್ಲಿ 'ಸ್ವಾತಂತ್ರ್ಯ ಹೋರಾಟಗಾರರಿಗೆ' ಅಂತ ರಿಸರ್ವ್ ಸೀಟ್ ಇಟ್ಟಿದ್ದಾರೆ' ಎಂದ. ಆಗ ರಾಜೇಶ ಹೇಳಿದ, 'ಹೌದು ಕಣೊ, ಆದ್ರೆ ಆ ಸೀಟುಗಳಲ್ಲಿ ಕುಳಿತುಕೊಳ್ಳುವವರೆಲ್ಲ ಮದುವೆ ಆದ ಗಂಡಸರೆ.'

**ನರಸಿಂಹ ಪೈ**

ಚಿತ್ರಗಳು: ಗಣೇಶ ಆಚಾರ್ಯ